# www.karunaduexams.com

ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್-ಫೆಬ್ರವರಿ ,9,10,2017

www.karunaduexams.com

1. 2017 ಭೌದ್ದಿಕ ಆಸ್ತಿ ಸೂಚ್ಯಂಕ (Intellectual Property Index) ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 43

ಆ) 34

ಇ) 59

ಈ) 61

43

2017 ಭೌದ್ದಿಕ ಆಸ್ತಿ ಸೂಚ್ಯಂಕದಲ್ಲಿ 45 ಪ್ರಮುಖ ರಾಷ್ಟ್ರಗಳ ಪೈಕಿ ಭಾರತ 43ನೇ ಸ್ಥಾನವನ್ನು ಪಡೆದುಕೊಂಡಿದೆ. ಅಮೆರಿಕ, ಯುಕೆ ಮತ್ತು ಜರ್ಮನಿ ಮೊದಲ ಮೂರು ಸ್ಥಾನದಲ್ಲಿವೆ. ಯುನೈಟೆಡ್ ಚೇಂಬರ್ ಆಫ್ ಕಾಮರ್ಸ್ ಈ ಸೂಚ್ಯಂಕವನ್ನು ಹೊರತರುತ್ತಿದೆ.

2. ಶಾಲಾ ಮಕ್ಕಳಲ್ಲಿ ಪುಟ್ಬಾಲ್ ಕ್ರೀಡೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಸರ್ಕಾರ ಯಾವ ಯೋಜನೆಯನ್ನು ಜಾರಿಗೆ ತಂದಿದೆ?

ಅ) ಮಿಷನ್-IX-ಮಿಲಿಯನ್

ಆ) ಮಿಷನ್- XI- ಮಿಲಿಯನ್

ಇ) ಮಿಷನ್-XII- ಮಿಲಿಯನ್

ಈ) ಮಿಷನ್-XV- ಮಿಲಿಯನ್

ಮಿಷನ್- XI- ಮಿಲಿಯನ್

ಶಾಲಾ ಮಕ್ಕಳಲ್ಲಿ ಪುಟ್ಬಾಲ್ ಆಟವನ್ನು ಪ್ರೇರೆಪಿಸುವ ಸಲುವಾಗಿ ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಖಾತೆ ರಾಜ್ಯ ಸಚಿವ ವಿಜಯ್ ಗೋಯೆಲ್ ಅವರು "ಮಿಷನ್- XI- ಮಿಲಿಯನ್" ಕ್ರೀಡಾ ಯೋಜನೆಗೆ ಚಾಲನೆ ನೀಡಿದರು. ದೇಶವ್ಯಾಪ್ತಿ ಸುಮಾರು 11 ಮಿಲಿಯನ್ ಶಾಲೆ ಮಕ್ಕಳಲ್ಲಿ ಪುಟ್ಬಾಲ್ ಕ್ರೀಡೆಯ ಬಗ್ಗೆ ಸ್ಪೂರ್ತಿಯನ್ನು ರೂಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

3. ಪ್ರಪ್ರಥಮ "ರಾಷ್ಟ್ರೀಯ ಮಹಿಳಾ ಸಂಸದರ (National Women's Parliament)" ಸಮಾವೇಶ ಯಾವ ರಾಜ್ಯದಲ್ಲಿ ಆಯೋಜಿಸಲಾಗಿತ್ತು?

ಅ) ಆಂಧ್ರ ಪ್ರದೇಶ

ಆ) ತಮಿಳುನಾಡು

ಇ) ಮಹಾರಾಷ್ಟ್ರ

ಈ) ಕರ್ನಾಟಕ

ಆಂಧ್ರ ಪ್ರದೇಶ

www.karunaduexams.com

ಆಂಧ್ರ ಪ್ರದೇಶದ ಅಮರಾವತಿಯಲ್ಲಿ ಪ್ರಪ್ರಥಮ "ರಾಷ್ಟ್ರೀಯ ಮಹಿಳಾ ಸಂಸದರ (National Women's Parliament)" ಸಮಾವೇಶ ಇತ್ತೀಚೆಗೆ ಜರುಗಿತು. ಆಂಧ್ರ ಪ್ರದೇಶ ವಿಧಾನ ಸಭೆ ಈ ಸಮಾವೇಶವನ್ನು ಆಯೋಜಿಸಿತ್ತು. "ಎಂಪರಿಂಗ್ ವುಮೆನ್-ಸ್ಟ್ರೆಂತನಿಂಗ್ ಡೆಮಾಕ್ರಸಿ" ಸಮಾವೇಶದ ಧ್ಯೇಯವಾಕ್ಯ.

4. ನೊಬೆಲ್ ಪ್ರಶಸ್ತಿ ವಿಜೇತ "ಸರ್ ಪೀಟರ್ ಮ್ಯಾನ್ಸ್ ಫೀಲ್ಡ್" ಇತ್ತೀಚೆಗೆ ನಿಧನರಾದರು. ಇವರು ಯಾವ ದೇಶಕ್ಕೆ ಸೇರಿದವರು?
ಅ) ಫ್ರಾನ್ಸ್
ಆ) ಇಂಗ್ಲೆಂಡ್
ಇ) ಅಮೆರಿಕ
ಈ) ರಷ್ಯಾ
ಇಂಗ್ಲೆಂಡ್
ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್ (MRI) ಖ್ಯಾತಿ, ನೊಬೆಲ್ ಪುರಸ್ಕೃತ ಸರ್ ಪೀಟರ್ ಮ್ಯಾನ್ಸ್ ಫೀಲ್ಡ್" ನಿಧನರಾದರು. 2003 ರಲ್ಲಿ ಇವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು.

5. 18ನೇ ಏಷ್ಯಾ ಜೂನಿಯರ್ ಟೀಂ ಸ್ಕ್ವಾಷ್ ಚಾಂಪಿಯನ್ ಷಿಪ್ ನಲ್ಲಿ ಪ್ರಶಸ್ತಿ ಗೆದ್ದ ರಾಷ್ಟ್ರ ಯಾವುದು?
ಅ) ಭಾರತ
ಆ) ಚೀನಾ
ಇ) ಪಾಕಿಸ್ತಾನ
ಈ) ಶ್ರೀಲಂಕಾ
ಭಾರತ
ಭಾರತ ತಂಡ 18ನೇ ಏಷ್ಯಾ ಜೂನಿಯರ್ ಸ್ಕ್ವಾಷ್ ಚಾಂಪಿಯನ್ ಷಿಪ್ ನಲ್ಲಿ ಮಲೇಷಿಯಾ ತಂಡವನ್ನು 2-0 ರಲ್ಲಿ ಸೋಲಿಸುವ ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಆ ಮೂಲಕ ಎರಡನೇ ಬಾರಿಗೆ ಈ ಚಾಂಪಿಯನ್ ಷಿಪ್ ನಲ್ಲಿ ಭಾರತ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. 2011 ರಲ್ಲಿ ಪಾಕಿಸ್ತಾನವನ್ನು ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತ್ತು.

6. ಭಾರತೀಯ ಷೇರು ವಿನಿಮಯ ನಿಯಂತ್ರಣ ಮಂಡಳಿ (ಸೆಬಿ)ಯ ನೂತನ ಅಧ್ಯಕ್ಷರು ಯಾರು?

www.karunaduexams.com

ಅ) ಅಜಯ್ ತ್ಯಾಗಿ

ಆ) ಸೌರವ್ ಕೊಠಾರಿ

ಇ) ಮನೀಷ್ ಸಿಂಗ್

ಈ) ಅನೂಪ್ ಮಜ್ಜು

ಅಜಯ್ ತ್ಯಾಗಿ

1984ನೇ ಬ್ಯಾಚಿನ ಹಿರಿಯ ಐಎಎಸ್ ಅಧಿಕಾರಿ ಅಜಯ್ ತ್ಯಾಗಿ ಅವರು ಸೆಬಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಮಾರ್ಚ್ 1, 2017 ರಂದು ಯು.ಕೆ.ಸಿನ್ಹಾ ಅವರು ನಿವೃತ್ತಿ ಹೊಂದಲಿದ್ದು, ಅವರ ಸ್ಥಾನವನ್ನು ತ್ಯಾಗಿ ತುಂಬಲಿದ್ದಾರೆ.

7. ಭಾರತದ ಮೊದಲ "ಕ್ವಾಲಿಟಿ & ರಿಲಿಯಾಬಿಲಿಟಿ (Quality and Reliability)" ಶಾಲೆಯನ್ನು ಸ್ಥಾಪಿಸಲಿರುವ ಐಐಟಿ ಯಾವುದು?

ಅ) ಐಐಟಿ, ಮುಂಬೈ

ಆ) ಐಐಟಿ, ಖರಗಪುರ್

ಇ) ಐಐಟಿ, ಮದ್ರಾಸ್

ಈ) ಐಐಟಿ, ಇಂದೋರ್

ಐಐಟಿ, ಖರಗಪುರ್

8. ಈ ಕೆಳಗಿನ ಯಾವ ರಾಜ್ಯ ಸರ್ಕಾರ ಇತ್ತೀಚೆಗೆ ಹಳ್ಳಿಗಳ ಅಭಿವೃದ್ಧಿಗಾಗಿ "ಮುಖ್ಯಮಂತ್ರಿ ಸಮಗ್ರ ಗ್ರಾಮ್ಯ ಉನ್ನಾಯನ್ ಯೋಜನೆ"ಯನ್ನು ಜಾರಿಗೆ ತಂದಿದೆ?

ಅ) ಸಿಕ್ಕಿಂ

ಆ) ಅರುಣಾಚಲ ಪ್ರದೇಶ

ಇ) ಅಸ್ಸಾಂ

ಈ) ನಾಗಲ್ಯಾಂಡ್

ಅಸ್ಸಾಂ

ಅಸ್ಸಾಂ ಮುಖ್ಯಮಂತ್ರಿ ಸರಬನಂದ ಸೊನೊವಾಲ್ ಅವರು ಇತ್ತೀಚೆಗೆ ಮುಖ್ಯಮಂತ್ರಿ ಸಮಗ್ರ ಗ್ರಾಮ್ಯ ಉನ್ನಾಯನ್ ಯೋಜನೆಗೆ ಚಾಲನೆ ನೀಡಿದರು. ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಯೋಜನೆಯ ಮುಖ್ಯ ಗುರಿ. ಇದಕ್ಕಾಗಿ ರೂ 30,000 ಕೋಟಿಯನ್ನು ಮುಂದಿನ ಐದು ವರ್ಷಗಳಲ್ಲಿ ವ್ಯಯಿಸಲಾಗುವುದು.

9. ದೃಷ್ಠಿ ಮಾಂದ್ಯರಿಗಾಗಿ ವಿಶ್ವದ ಮೊದಲ ಬ್ರೈಲಿ ಅಟ್ಲಾಸ್ ಅನ್ನು ಯಾವ ದೇಶದಲ್ಲಿ ಪರಿಚಯಿಸಲಾಯಿತು?

ಅ) ಭಾರತ

www.karunaduexams.com

ಆ) ರಷ್ಯಾ

ಇ) ಜಪಾನ್

ಈ) ಜರ್ಮನಿ

ಭಾರತ

ವಿಶ್ವದ ಮೊದಲ ಬ್ರೈಲಿ ಅಟ್ಲಾಸ್ ಅನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಡಾ. ಹರ್ಷವರ್ಧನ್ ರಾಥೋಡ್ ಅವರು ಬಿಡುಗಡೆಗೊಳಿಸಿದರು. "ಅಟ್ಲಾಸ್ ಫಾರ್ ವಿಷುಯಲಿ ಇಂಪೆರ್ಡ್" ನ್ಯಾಷನಲ್ ಅಟ್ಲಾಸ್ & ಥೆಮಾಟಿಕ್ ಮ್ಯಾಪಿಂಗ್ ಆರ್ಗನೇಸೆಷನ್" ಅಭಿವೃದ್ಧಿಪಡಿಸಿದೆ.

10. 4ನೇ BIMSTEC (ಬಿಮ್ ಸ್ಟೆಕ್) ಶೃಂಗಸಭೆ-2017 ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ನೇಪಾಳ

ಇ) ಶ್ರೀಲಂಕಾ

ಈ) ಬಾಂಗ್ಲದೇಶ

ನೇಪಾಳ

ನಾಲ್ಕನೇ ಬಿಮ್ ಸ್ಟೆಕ್ ಶೃಂಗಸಭೆ ನೇಪಾಳದಲ್ಲಿ ನಡೆಯಲಿದೆ. ಬಿಮ್ ಸ್ಟೆಕ್ ಅನ್ನು 1997 ರಲ್ಲಿ ಸ್ಥಾಪಿಸಲಾಗಿದ್ದು, ಭೂತಾನ್, ಬಾಂಗ್ಲದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ ಮತ್ತು ಥಾಯ್ಲೆಂಡ್ ಇದರ ಸದಸ್ಯ ರಾಷ್ಟ್ರಗಳಾಗಿವೆ.

www.karunaduexams.com